
# ಪರಿಪೂರ್ಣತೆ

ಪರಿಪೂರ್ಣತೆ ಆದೊಂದು ವೃತ್ತ...
ಅಲ್ಲಿ ಹೊಳಲುಗಳಿಲ್ಲ, ಬಿಳಲುಗಳೂ ಇಲ್ಲ
ಕವಲೆಂಬುದಿಲ್ಲವೇ ಇಲ್ಲ...
ಅದು ತನ್ನೊಳಗೆ ತಾನು ಅನಂತ!

ಆದೊಂದು ಬುದ್ಧತ್ವ...
ಸೆಳೆಯಬಲ್ಲದು ಪಡೆಯಲಾಗದು;
ಪೊರೆಯಬಲ್ಲದು ತಾಕಲಾಗದು
ಅದು,
ಆದಿಅಂತ್ಯಗಳಿಲ್ಲದ ಪರಿಶುದ್ಧತ್ವ...



ಆದೊಂದು ಬೆಳಕು...
ಬೆಳಗಬಲ್ಲದು ಭವಿಸಲಾಗದು
ಹಂಬಲಿಸಬಲ್ಲೆವು
ಭರಿಸಲಾಗದು
ಅದು ತನ್ನ ತಾ ಮೀರಿದ
ಗುರುತ್ವ...

ಆದೊಂದು ಆತ್ಮಸಾಂಗತ್ಯ
ಜೀವಭಾವ ಬಂಧುತ್ವ;
ಅರಿವಿನ ಧಾರೆ ಅನುಭಾವದ ಪ್ರೀತಿ
ಸವೆದಷ್ಟು ಹಾದಿ ಪಡೆದಷ್ಟು ಸಾನಿಧ್ಯ...

● ಅನನ್ಯ ತುಷಿರಾ